ಮಂಜೂರು ಮಾಡಿರುವುದಿಲ್ಲ.

ಆ) ಹಾಗಿದ್ದಲ್ಲಿ, ಈ ಒಳಚರಂಡಿ ಕಾಮಗಾರಿಗಳಿಗೆ ಎಷ್ಟು ಹಣ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ;

ಹಣ ಬಿಡುಗಡೆಯಾಗಿಲ್ಲ.

ಇ) ಹಣ ಮಂಜೂರಾಗಿದ್ದರೂ ಈ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1188(1583)
ಮಾನ್ಯ ಸದಸ್ಯರ ಹೆಸರು : ಶ್ರೀ. ಕೃಷ್ಣಪ್ಪ ಎಂ.ಟಿ.(ತುರುವೇಕೆರೆ)
ಉತ್ತರಿಸುವ ಸಚಿವರು : ಶ್ರೀ. ಕೆ. ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಶಿಂಷಾ ನದಿಗೆ ಅಡ್ಡಲಾಗಿ ಮನೆ ಚೆಂಡೂರು ಹಾಗೂ ಮುತ್ತಂದ್ರಗಳ ಸಮೀಪ ಎರಡು ಪಿಕಪ್‌ಗಳನ್ನು ನಿರ್ಮಿಸುವ ಕೆಲಸ ಇನ್ನೂ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೋಂಡಿರುವ ಕ್ರಮಗಳೇನು;

ಮಣಿಚೆಂಡೂರು ಹಾಗೂ ಮುತ್ತ್ಸಂದ್ರ ಗ್ರಾಮಗಳ ಸಮೀಪ ಪಿಕಪ್‌ಗಳನ್ನು ನಿರ್ಮಿಸಲು ಅಂದಾಜುಗಳನ್ನು ಕ್ರಮವಾಗಿ ರೂ. 76.85 ಲಕ್ಷ ಹಾಗೂ ರೂ.99.10 ಲಕ್ಷಗಳಿಗೆ ತಯಾರಿಸಲಾಗಿದೆ.

ಇ) ಯಾವಾಗ ಈ ಕೆಲಸವನ್ನು ಪ್ರಾರಂಭಿಸಲಾಗುವುದು?

ಈ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1189(1584)
ಮಾನ್ಯ ಸದಸ್ಯರ ಹೆಸರು : ಶ್ರೀ. ಕೃಷ್ಣಪ್ಪ ಎಂ.ಟಿ.(ತುರುವೇಕೆರೆ)
ಉತ್ತರಿಸುವ ಸಚಿವರು : ಶ್ರೀ. ಎಸ್. ಎ. ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಗ್ರಾಮೀಣ ನೀರು ಸರಬರಾಜು ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಕಳೆದ 3 ವರ್ಷಗಳಿಂದ ನೀಡಿದ ಮತ್ತು ಖರ್ಚು ಮಾಡಿದ ಹಣವೆಷ್ಟು (ವೆಚ್ಚವಾರು ವಿವರ ನೀಡುವುದು);